ಉಪಾಧ್ಯಕ್ಷಣೆಯವರು: ಅವರು ನಿನ್ನೆ ದಿವಸ ಎತ್ತಿದ್ದರು, ಉತ್ತರ ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಇದು ಒಂದೇ ದಿವಸ ಉಳಿಯುವಂತ ಸ್ಥಿತಿಯಲ್ಲ. ನೆನ್ನೆ ಬಂದಿರುವುದು ಇದು ವಿಸರ್ಜನೆಯಾಗಬೇಕು, ಇಲ್ಲ ಉಳಿಯಬೇಕು.

ಉಪಾಧ್ಯಕ್ಷಣೇಯವರು: ಈಗ ನಿಮಗೆ ಉತ್ತರ ಬೇಕೋ, ಬೇಡವೋ?

ಶ್ರೀ ವಾಟಾಳ್ ನಾಗರಾಜ್: ತಾವೇ ಉತ್ತರ ಕೊಡಿ ಸ್ವಾಮಿ ನಮ್ಮದೇನು ಅಭ್ಯಂತರವಿಲ್ಲ.

ಉಪಾಧ್ಯಕ್ಷಣೇಯವರು: ಇದೇ ವಿಷಯವನ್ನು ಎತ್ತಿದ್ದಾರೆ, ಈಗ ಮತ್ತೆ ಮತ್ತೆ ಆ ಪ್ರಶ್ನೆ ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ವಾಟಾಳ್ ನಾಗರಾಜ್ ತಯಾರಿಗೋಸ್ಕರ ಈಗ ಅವರು ಹೌಸ್‌ಗೆ ಬರುತ್ತಿರಲಿಲ್ಲ, ಅವರೆಲ್ಲಾ ತಯಾರು ಮಾಡಿಕೊಂಡು ಕಾರನ್ನೋ ಅಥವಾ ಜೀಪನ್ನೋ ರೆಡಿಮಾಡಿಕೊಂಡು ಚಾಮರಾಜನಗರದ ಕಡೆಗೆ ಹೊರಟಿರುತ್ತಿದ್ದರು. ಇದು ಆಗುವುದಿಲ್ಲ ಅಂತ ಅವರಿಗೂ ಗೊತ್ತಿದೆ.

ಉಪಾಧ್ಯಕ್ಷಣೆಯವರು: ಆಯಿತು, ಆಯಿತು

ಶ್ರೀ ವಾಟಾಳ್ ನಾಗರಾಜ್: ವಿಸರ್ಜನೆಯಾಗುವುದಿಲ್ಲ, ಅಂಥ ಅಂದುಕೊಂಡಿದ್ದೇನೆ. ಆದರೂ ಸಹ ಭಾರಿ ನಡೆಯುತ್ತಾ ಇದೆ ಬಹುಶಃ 1ನೇ ತಾರೀಖಿನೊಳಗೆ ಆಗುತ್ತದೆಂದು ಕೆಲವು ಜನ ಹೇಳುತ್ತಿದ್ದಾರೆ. ಇದು ಬಸವಲಿಂಗಪ್ಪನವರಿಗೆ ಗೊತ್ತಿರಬಹುದು.

ಉಪಾಧ್ಯಕ್ಷಣೆಯವರು: ಈ ಪ್ರಶ್ನೆಗೆ ಉತ್ತರ ಆಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಆ ಪ್ರಶ್ನೆ ಉದ್ಭವಿಸುವುದಿಲ್ಲ, ತಾವು ಕಂಟಿನ್ಯೂ ಆಗುತ್ತೀರಿ.

6) ಉಡುಪಿ ತಾಲ್ಲೂಕು ಹಂಗಾರ ಕಟ್ಟೆ ಮತ್ತು ಬೆಂಗ್ರೆ ನಡುವೆ ಕಡವು ಬೋಟಿನ ಸೌಕರ್ಯ ಒದಗಿಸುವುದು.

ಶ್ರೀ ಪಿ. ಬಸವರಾಜು : ಮಾನ್ಯ ಅಧ್ಯಕ್ಷರೇ, ಉಡುಪಿ ತಾಲ್ಲೂಕು ಹಂಗಾರಕಟ್ಟೆಯ ಸಮೀಪ ಬೆಂಗ್ರೆ ನಿವಾಸಿಗಳು ದಿನನಿತ್ಯದ ಆವಶ್ಯಕತೆಗಳಿಗೆ ಹೊಳೆ ದಾಟಿ ಹಂಗಾರಕಟ್ಟೆಗೆ ಬರುವುದು ಅನಿವಾರ್ಯವಾಗಿದೆ. ಇವುಗಳ ನಡುವೆ ಹರಿಯುವ ಹೊಳೆಯನ್ನು ದಾಟಲು ಈಗ ಇರುವ ಫೆರೋ ಸಿಮೆಂಟ್ ಬೋಟ್ ರಿಪೇರಿ ಕೂಡ ಸಾಧ್ಯವಾಗದೆ ತುಂಬಾ ಹಾಳಾಗಿರುತ್ತದೆ. ಈ ಬೋಟ್ ಅಲ್ಲಲ್ಲಿ ಬಿರುಕು ಬಿಟ್ಟಿದ್ದು ನೀರು ಒಸರುತ್ತದೆ. ಕಳೆದ ಅಕ್ಟೋಬರ್ 2ರಂದು ಸನ್ಮಾನ್ಯ ಮೀನುಗಾರಿಕೆ ಮಂತ್ರಿಗಳು ಜನವರಿ 91ರೊಳಗೆ ಹೊಸ ಬೋಟನ್ನು ಒದಗಿಸುವ ಆಶ್ವಾಸನೆ ಸ್ಥಳೀಯರಿಗೆ ನೀಡಿದ್ದರೂ ಅಧಿಕಾರಿಗಳ ನಿರ್ಲಕ್ಷದಿಂದ ಕಾರ್ಯರೂಪಕ್ಕೆ ಬಂದಿಲ್ಲ. ನಂತರ ಸಂಬಂಧಿತ ಅಧಿಕಾರಿಗಳು ಬೇಟಿ ನೀಡಿದರೂ ಯಾವ ಉಪಯೋಗವೂ ಸಾರ್ವಜನಿಕರಿಗೆ. ಆಗದೆ ಹಳೇ ಬೋಟಿನಲ್ಲಿ ಭಯದ ನೆರಳಿನಲ್ಲಿ ಕಡವು ದಾಟುತ್ತಿದ್ದಾರೆ. ಜನರ ಜೀವನ ಮರಣಗಳ ಪ್ರಶ್ನೆ ಇದ್ದಾಗಿದ್ದು ಕೂಡಲೇ ಹೊಸ ಬೋಟನ್ನು ಇಲಾಖಾ ವತಿಯಿಂದ ಈ ತಡವಿಗೆ ನೀಡಬೇಕೆಂದು ಮುಖ್ಯಮಂತ್ರಿಯವರನ್ನು ಕೋರುತ್ತೇನೆ.

ಶ್ರೀ ಕೆ. ಶಿವಮೂರ್ತಿ (ಅಬಕಾರಿ ಸಚಿವರು) ಮುಖ್ಯ ಮಂತ್ರಿಗಳ ಪರವಾಗಿ: ದಕ್ಷಿಣ ಕನ್ನಡ ಜಿಲ್ಲೆಯ ಹಂಗಾರಕಟ್ಟಾ ಬೆಂಗ್ರೆ ನಡುವೆ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ಈ ಹಿಂದೆ ಎರಡು ಯಂತ್ರ ಚಾಲಿತ ನಾವೆಗಳನ್ನು ಒದಗಿಸಿ ಪ್ರಯಾಣಿಕರಿಗೆ ಸಾರಿಗೆ ಸೌಲಭ್ಯಗಳನ್ನು ಕಲ್ಪಿಸಲಾಗಿತ್ತು. ಈ ಕಡವಿನಲ್ಲಿಯ ಈ ಎರಡು ನಾವೆಗಳಲ್ಲಿ ಒಂದು ಹಳೆಯ ಕಟ್ಟಿಗೆ ಯಂತ್ರಚಾಲಿತ ನಾವೆಯ

ಬಾಳಿಕೆಯ ಅವಧಿ ಮುಗಿದಿದ್ದುದರಿಂದ ಸ್ಥಗಿತಗೊಳಿಸಿ ಆದರ ಬದಲಾಗಿ ಒಂದು ಹೊಸ ನಾವೆಯನ್ನ ಖರೀದಿಸಲು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದ್ದು, ಈ ಸಂಬಂಧದಲ್ಲಿ ಆದೇಶ ಹೊರಡಿಸಲಾಗಿದೆ. ಇನ್ನೊಂದು ಫೆರೊ ಸಿಮೆಂಟ್ ನಾವೆಯು ಸತತ ಚಾಲನೆಯಿಂದ ತಳಭಾಗದಲ್ಲಿ ಅವಶ್ಯಕ ದುರಸ್ತಿ ಕೆಲಸಗಳನ್ನು ಕೈಗೊಳ್ಳಬೇಕಾದುದರಿಂದ ಈ ನಾವೆಗಳನ್ನು ಸ್ಥಗಿತಗೊಳಿಸಲಾಗಿತ್ತು. ಈ ನಾವೆಗೆ ಸಿಮೆಂಟ್ ಲೇಪನ ಮಾಡಿ ದುರಸ್ತಿ ಕೆಲಸ ಕೈಗೊಂಡಿದ್ದು ವರ್ಷ ಖಿತುವಾಗಿದ್ದರಿಂದ ಇದು ಒಣಗಲು (ಕ್ಯೂರಿಂಗ್‌ಗೆ) ಸ್ವಲ್ಪ ಕಾಲವಕಾಶ ಹಿಡಿದಿದ್ದು ಈ ಸಮಯದಲ್ಲಿ ಕಡವಿನ ಸೇವೆಯು ಸ್ಥಗಿತಗೊಂಡಿತ್ತು. ನಾವೆಯ ದುರಸ್ತಿ ನಂತರ, ಕಡವಿನ ಸೇವೆಗೆ ದಿನಾಂಕ 10-7-90ರಿಂದ ತೊಡಗಿಸಿದ್ದು, ಕಡವು ಸೇವೆಯನ್ನು ಪುನಃ ಪ್ರಾರಂಭಿಸಲಾಗಿತ್ತು. ಈ ನಾವೆಯ ಸಣ್ಣ ಪುಟ್ಟ ದುರಸ್ತಿಗಳನ್ನು ಶೀಘ್ರವಾಗಿ ಕೈಗೊಳ್ಳಲಾಗುವುದು.

ಸರ್ಕಾರಿ ಆದೇಶ ಸಂಖ್ಯೆ: ಪಿಡಬ್ಲ್ಯೂಡಿ 55 ಬಂಒಜ 90, ದಿನಾಂಕ 14-3-91ರಲ್ಲಿ 2 ಮರದ ಮೂಗ ನಾವೆಗಳು, 2 ಫೈಬರ್‌ಗ್ಲಾಸ್ ನಾವೆಗಳು ಮತ್ತು 2 ಯಂತ್ರಚಾಲಿತ ಉಕ್ಕಿನ ನಾವೆಗಳನ್ನು 14.00 ಲಕ್ಷ ರೂ.ಗಳ ಅಂದಾಜು ವೆಚ್ಚದಲ್ಲಿ ಖರೀದಿಸಲು ಮಂಜೂರಾತಿ ನೀಡಿದೆ. ಇವುಗಳಲ್ಲಿ 2 ನಾವೆಗಳಿಗೆ ಬಂದರು ಮತ್ತು ಒಳನಾಡು ಜಲಸಾರಿಗೆ ನಿರ್ದೇಶಕರು ದಿನಾಂಕ 10-7-91ರಂದು ಕಾರ್ಯಾದೇಶ ನೀಡಿರುವರೆಂದು ತಿಳಿದು ಬಂದಿದೆ. ಈ ನಾವೆಗಳನ್ನು ಶೀಘ್ರವಾಗಿ ಒದಗಿಸಿಕೊಂಡು ಕೂಡಲೇ ಸದರಿ ಕಡವು ಸೇವೆಯಲ್ಲಿ ತೊಡಗಿಸಲು ಕ್ರಮ ಕೈಗೊಳ್ಳಲಾಗುವುದು.

7) ಬೆಂಗಳೂರಿನ ಜೆ.ಸಿ. ರಸ್ತೆಯಲ್ಲಿರುವ ಶ್ರೀ ಅಂಜುಮನೆ ಮಹದೇವಯ್ಯನವರ ಜಾಗದಲ್ಲಿ ಅನಧಿಕೃತವಾಗಿ ವಾಸವಾಗಿರುವುದು.

SRI R. DAYANANDA RAO: Madam Deputy Speaker, on behalf of Sri Sadat Ali Khan I would like to mention:

In the year 1987, the then Chief Minister had passed orders to vacate the unauthorised occupation of site belonging to Anjumane Mahadevaiah, Bangalore by Ramanna D'Souza Slum at J.C. Road, Bangalore. So far , the unauthorised occupation has not been vacated and land was not handed over to Anjumane Mahadeviah. Will the Government take immediate action to get the unauthorised occupation vacated and hand over the land to the institution?

SRI K. SHIVA MURTHY: On behalf of the Minister for Housing and Urban Development, I would like to make the following statement:

Karnataka Slum Clearance Board in its Board meeting held on 9-6-1987 has resolved to shift the slum dwellers of Ramanna D'Souza garden, J.C. Road after getting the land value and shifting charges from the land owners and after getting declared the said area u/s 3 and 11 of KSA (I & C) Act. 73 as slum area and slum clearance area. Accordingly the Deputy Commissioner, Bangalore has declared the said area u/s 3 (F) vide notification dtd.21.3.1989. The proposal is built up for declaring the area u/s 11 of the Act. Since there is no suitable land provided by the land owners, shifting work is still pending. Further action will be taken after obtaining consent of the land-lord regarding payment of land value, shifting charges , development charges, etc, as per